## ಕಣ್ಮನ ತಣಿಸುವ ಕೆರೆ



ಕೊರೊನಾ ಸೃಷ್ಟಿಸಿರುವ ಈ ಸನ್ನಿವೇಶದಲ್ಲಿ ದೂರ ಪ್ರವಾಸ ದೂರದ ಮಾತು. ಹಾಗಾಗಿ ಪ್ರಚಾರವಿಲ್ಲದೇ ವನಸುಮದಂತಿರುವ ನಮ್ಮ ನಾಡಿನ ಸುಂದರ ತಾಣಗಳು ಸುತ್ತಮುತ್ತಲಿನ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿವೆ. ಅಂತಹ ಒಂದು ತಾಣ, ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಜಾನಕಲ್‌ನಲ್ಲಿರುವ ಶಂಕರಲಿಂಗೇಶ್ವರ ಗುಡಿ.

ಪಾಳೇಗಾರ ಮದಕರಿನಾಯಕ ಹುಟ್ಟಿದೂರು ಜಾನಕಲ್ಲು. ಇಲ್ಲಿನ ಕೆರೆಯ ಮಧ್ಯದಲ್ಲಿರುವ ಗುಡಿ ಇದೆ. ಒಂದು ಮಗ್ಗುಲಲ್ಲಿ ಪುಟ್ಟ ಬಂಡೆಯ ಬೆಟ್ಟವಿದೆ. ಇದನ್ನೇರಿ ಕುಳಿತು ವಿಶಾಲ ಕೆರೆ ಹಾಗೂ ಕೊಕ್ಕರೆ, ಬೆಳ್ಳಕ್ಕಿಗಳ ದರ್ಶನ ಮಾಡಬಹುದು. ಸುಮಾರು ಮೂರು ಶತಮಾನಗಳ ಇತಿಹಾಸ ಹೊಂದಿರುವ ಗುಡಿಯೊಳಗೆ, ಲಿಂಗರೂಪಿ ಶಿವ ಹಾಗೂ ಅವನ ಮುಂದಿರುವ ಬೃಹತ್ ನಂದಿಯ ದರ್ಶನವನ್ನೂ ಮಾಡಬಹುದು. ಊಟ ತಿಂಡಿ ಒಯ್ದಿದ್ದರೆ ಕೆರೆಯ ಮುಂಭಾಗದ ದೇಗುಲದ ಪ್ರಾಂಗಣದಲ್ಲಿ ಕುಳಿತು ಸವಿಯಬಹುದು. ವಿಶಾಲ ಕೆರೆಯ ಹಿಂಭಾಗದಲ್ಲಿರುವ ಸುಂದರ ಬಂಡೆ ಬೆಟ್ಟ, ಅದರಲ್ಲಿನ ಕೋಟೆಯ ಅವಶೇಷಗಳ ದೃಶ್ಯ ನಯನ ಮನೋಹರ.

—ಎಚ್.ಎಸ್. ನವೀನಕುಮಾರ್ ಹೊಸದುರ್ಗ

## ಅಮೆರಿಕದವರ ನಂಬಿಕೆ

ನಮ್ಮಲ್ಲಿ ಜನ ಹರಕೆ ಹೊತ್ತು ಆಲ, ಅತ್ತಿ, ಅರಳಿ ಮರಗಳಿಗೆ ಹಳದಿ, ಕೆಂಪುದಾರ ಕಟ್ಟುವುದನ್ನು, ದೇವಾಲಯಗಳಲ್ಲಿ ಪುಟ್ಟ ಪುಟ್ಟ ತೊಟ್ಟಿಲು, ಗಂಟೆ, ತೆಂಗಿನಕಾಯಿ ಕಟ್ಟುವುದನ್ನು ನೋಡಿರುತ್ತೇವೆ. ಇವೆಲ್ಲ ನಂಬಿಕೆ, ಶ್ರದ್ಧೆಯ ವಿಷಯ. ಇಂಥದ್ದೇ ನಂಬಿಕೆಯೊಂದು ಅಮೆರಿಕಾದಲ್ಲೂ ಇದೆ ಎಂದರೆ ಆಶ್ಚರ್ಯ ವಾಗಬಹುದು.

ಸ್ಯಾನ್‌ಫ್ರಾನ್ಸಿಸ್ಕೋದ ಪಿಯರ್‌–39 ಎಂಬಲ್ಲಿ ಪೆಸಿಫಿಕ್ ಸಾಗರದ ದಂಡೆಯುದ್ದಕ್ಕೂ ತಂತಿಯ ಬೇಲಿಯಿದೆ. ಆ ತಂತಿಗೆ ಅನೇಕ ಬಣ್ಣ ಮತ್ತು ಆಕಾರಗಳ ಬೀಗಗಳನ್ನು ಸಾವಿರಾರು ಸಂಖ್ಯೆಯಲ್ಲಿ ಹಾಕಲಾಗಿದೆ. ಅವುಗಳ ಮೇಲೆ ಹೆಸರು ದಿನಾಂಕ ಬರೆದಿದ್ದಾರೆ. ವಿಚಾರಿಸಿದಾಗ ತಿಳಿದು ಬಂದ ವಿಷಯವೇನೆಂದರೆ ಆ ಸ್ಥಳದಲ್ಲಿ ಬೀಗ ಹಾಕಿದರೆ ಗಂಡು–ಹೆಣ್ಣಿನ ಸಂಬಂಧ ಶಾಶ್ವತ ಹಾಗೂ ಸದೃಢ ವಾಗಿರುತ್ತದಂತೆ!

—ಮಂಜುಳಾ ಎನ್.ಡಿ. ಕ್ಯಾಲಿಫೋರ್ನಿಯಾ





## ಹಂತಕ ನೊಣ!

ಈ ನೊಣ ಬೇಟೆಯನ್ನು ಚುಚ್ಚಿ ಚುಚ್ಚಿ ಕೊಲ್ಲುತ್ತದೆ. ಇದೇ ಕಾರಣ ಇದನ್ನು ಕೊಲೆಗಡುಕ ನೊಣ ಎಂದು ಕರೆಯುತ್ತಾರೆ! ಈ ನೊಣದ ಬೇಟೆಯಾಡುವ ತಂತ್ರ ಹಾಗಿದೆ. ಇವು ಬದುಕಬೇಕೆಂದರೆ ಕೊಲೆ ಅನಿವಾರ್ಯ. ಜಗತ್ತಿನಲ್ಲಿ 7000 ವಿವಿಧ ಜಾತಿಯ ಕೊಲೆಗಡುಕ ನೊಣಗಳಿವೆ. ಇಂಗ್ಲಿಷ್ ಭಾಷೆಯಲ್ಲಿ ರಾಬರ್ ಫ್ಲೈ ಎನ್ನುವರು. ಒಮ್ಮೆ ಎಗರಿದರೆ ಬೇಟೆ ತಪ್ಪಿಸಿಕೊಳ್ಳುವ ಮಾತೇ ಇಲ್ಲ. ಬೇಟೆಯನ್ನು ತನ್ನ ಮುಳ್ಳಾದ ಕಾಲುಗಳಿಂದ ತಪ್ಪಿಸಿಕೊಳ್ಳದಂತೆ ಗಟ್ಟಿಯಾಗಿ ಹಿಡಿದು ಚುಚ್ಚಿ ಚುಚ್ಚಿ ಕೊಲ್ಲುತ್ತವೆ. ಹುಳು ಕೋಮಾ ಸ್ಥಿತಿಗೆ ತಲುಪುವಂತೆ ನ್ಯೂರೋಟಾಕ್ಸಿನ್ ಕಿಣ್ವಗಳನ್ನು ಅದರ ದೇಹದೊಳಕ್ಕೆ ಚುಚ್ಚುತ್ತವೆ. ಈ ಚಿತ್ರದಲ್ಲಿ ಮಿಡತೆಯೊಂದನ್ನು ಬೇಟೆಯಾಡಿದೆ. ಆಹಾರ ಸರಪಳಿಯಲ್ಲಿ ಒಂದು ಜೀವಿ ಮತ್ತೊಂದನ್ನು ತಿಂದು ಬದುಕುವ ಅನಿವಾರ್ಯತೆಯಿದೆ ಅಲ್ಲವೇ?

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು